UASB LIBRARY
Newspaper Clippings
Pg .1 Thursday 15-04-2021 Jai Kisan



ಮುಂಗಾರು ಆರಂಭಕ್ಕೂ ಮುನ್ನ ಎಚ್ಚರಿಕೆ ವಹಿಸಿದ ರಾಜ್ಯ ಸರಕಾರ

ಹಳೆಯ ದರದಲ್ಲೇ ಸಿಗಲಿದೆ ರಸಗೊಬ್ಬರ

■ ಶಿವಾನಂದ ಹಿರೇಮಠ ಬೆಂಗಳೂರು
shivanand.hiremath@timesgroup.com



ರಸಗೊಬ್ಬರ ದರ ಹೆಚ್ಚಾಗಿ ರೈತಾಪಿ ವರ್ಗ ಕಂಗಾಲಾಗುತ್ತಿದ್ದಂತೆಯೇ ಮುನ್ನೆಚ್ಚರಿಕೆ ವಹಿಸಿರುವ ರಾಜ್ಯ ಸರಕಾರ, ಪ್ರಸಕ್ತ ಸಾಲಿನ ಮುಂಗಾರಿನ ಅವಧಿಯಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ಕ್ರಮ ವಹಿಸಿದೆ. ಕಳೆದ ಸಾಲಿನ 11.55 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರವನ್ನು ಗೋದಾಮುಗಳಲ್ಲಿ ದಾಸ್ತಾನಿಟ್ಟಿದ್ದು, ಈ ಬಾರಿ ರೈತರಿಗೆ ರಸಗೊಬ್ಬರ ಪೂರೈಕೆಯಲ್ಲಿ ಸಮಸ್ಯೆ ಉದ್ಭವಿಸುವುದಿಲ್ಲ ಎಂದು ಹೇಳಿದೆ.

ರಾಜ್ಯಾದ್ಯಂತ 40 ರಸಗೊಬ್ಬರ ಗೋದಾಮುಗಳಿವೆ. ಇವುಗಳಲ್ಲಿ ಕಳೆದ ಸಾಲಿನ ಯೂರಿಯಾ, ಡಿಎಪಿ, ಎಂಒಪಿ ಹಾಗೂ ಕಾಂಪ್ಲೆಕ್ಸ್ ರಸಗೊಬ್ಬರ ದಾಸ್ತಾನಿಡಲಾಗಿದೆ. ಇದನ್ನು ದರ ಏರಿಕೆಗೂ ಮುನ್ನ ಇದ್ದಂತಹ ದರದಲ್ಲೇ ರೈತರಿಗೆ ವಿತರಿಸಲಾಗುತ್ತದೆ ಎಂದು ಕೃಷಿ ಇಲಾಖೆ ಸ್ಪಷ್ಟಪಡಿಸಿದೆ.

ಪ್ರಾಥಮಿಕ ಕೃಷಿ ಸಹಕಾರ ಸ್ವತ್ತು ಹಾಗೂ ಖಾಸಗಿ ಮಾರಾಟಗಾರರು ಸೇರಿದಂತೆ ಒಟ್ಟಾರೆ ರಾಜ್ಯದಲ್ಲಿ 11,000 ರಸಗೊಬ್ಬರ ಮಳಿಗೆಗಳ ಮೂಲಕ ರಸಗೊಬ್ಬರ ವಿತರಿಸಲಾಗುವುದು. ರೈತರು ತಮ್ಮ ಆಧಾರ್ ನಂಬರ್, ಕೃಷಿ ಭೂಮಿ ಪಹಣಿ ನೋಂದಣಿ ಮಾಡಿ ರಸಗೊಬ್ಬರ ಪಡೆಯಬಹುದು. 2020-21 ನೇ ಸಾಲಿನ ಬೆಲೆಯಲ್ಲೇ ರಸಗೊಬ್ಬರ ಮಾರಾಟ ಮಾಡಲಾಗುತ್ತದೆ.

ಪ್ರಸಕ್ತ ಮುಂಗಾರಿನ ಬೇಡಿಕೆ

2021-21ನೇ ಸಾಲಿನ ಮುಂಗಾರಿಗಾಗಿ ರಾಜ್ಯದಿಂದ ಒಟ್ಟಾರೆ 26,47,000 ಮೆಟ್ರಿಕ್ ಟನ್ ಬೇಡಿಕೆ ಇದೆ. ಏಪ್ರಿಲ್‌ನಲ್ಲಿ3.80 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆ ಇತ್ತು. ಈ ಪೈಕಿ ಈಗಾಗಲೇ ಕೇಂದ್ರ ಸರಕಾರ 3.60 ಲಕ್ಷ ಮೆಟ್ರಿಕ್ ಟನ್ ಹಂಚಿಕೆ ಮಾಡಿದೆ. ಕಳೆದ ವರ್ಷ 22,10,000 ಮೆಟ್ರಿಕ್ ಟನ್ ಬೇಡಿಕೆ ಇತ್ತು. ಕೇಂದ್ರ ಸರಕಾರ 25 ಲಕ್ಷಮೆಟ್ರಿಕ್ ಟನ್ ಪೂರೈಸಿತ್ತು.

ಮುಂಜಾಗ್ರತೆ: ಮುಂಗಾರು ಬಿತ್ತನೆಗೆ ಇನ್ನೂ ಎರಡು ತಿಂಗಳು ಬಾಕಿ ಇರುವಂತೆಯೇ ಸೂಕ್ತ ಪ್ರಮಾಣದ ರಸಗೊಬ್ಬರ ಸಂಗ್ರಹಕ್ಕೆ ರಾಜ್ಯ ಸರಕಾರ ಮುಂದಾಗಿದೆ. ಏಪ್ರಿಲ್ ಮೊದಲ ವಾರದಲ್ಲೇ ರಸಗೊಬ್ಬರ ಪೂರೈಸಲು ಕೇಂದ್ರ ಸರಕಾರಕ್ಕೆ ಕೃಷಿ ಇಲಾಖೆ ಇಂಡೆಂಟ್ ನೀಡಿದೆ. ಇದರನ್ವಯ ಏಪ್ರಿಲ್ ನಲ್ಲಿ3.60 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರವನ್ನು ರಾಜ್ಯಕ್ಕೆ ಹಂಚಿಕೆ ಮಾಡಲಾಗಿದೆ.

ಮೇ ಕೊನೆಯ ವಾರದಿಂದ ರಾಜ್ಯದಲ್ಲಿ ಬಿತ್ತನೆ ಪ್ರಕ್ರಿಯೆಗೆ ಚಾಲನೆ ಸಿಗಲಿದೆ. ಈ ಹಿನ್ನೆಲೆಯಲ್ಲಿಪ್ರತಿ ವರ್ಷ ಏಪ್ರಿಲ್ ಕೊನೆಯ ವಾರದಿಂದ ರಸಗೊಬ್ಬರ ದಾಸ್ತಾನು ಸಂಗ್ರಹಕ್ಕೆ ಸರಕಾರ ಚಾಲನೆ ನೀಡುತ್ತಿತ್ತು. ಈ ಬಾರಿ ಗೊಬ್ಬರ ಬೆಲೆ ಏರಿಕೆ ಗೊಂದಲ ಸೃಷ್ಟಿ ಆಗುತ್ತಿದ್ದಂತೆಯೇ ಏಪ್ರಿಲ್ ಮೊದಲ ವಾರದಿಂದಲೇ ಪೂರೈಕೆ ಪ್ರಕ್ರಿಯೆ ಆರಂಭವಾಗಿದೆ.

> ಕಳೆದ ಸಾಲಿನ ರಸಗೊಬ್ಬರದ ಬೆಲೆಯಲ್ಲಿ ಏರಿಕೆ ಇಲ್ಲ. ರೈತರು ಆತಂಕ ಪಡಬೇಕಿಲ್ಲ. ಕೊರೊನಾ ಸಂದರ್ಭದಲ್ಲೇ ಕೃಷಿ ಇಲಾಖೆ ಸಮರ್ಪಕ ರಸಗೊಬ್ಬರ ಪೂರೈಸಿದೆ. ಈ ವರ್ಷ ಸಮರ್ಪಕ ಸಂಗ್ರಹಕ್ಕೆ ಬೇಡಿಕೆ ಸಲ್ಲಿಸಲಾಗಿದೆ.
> **- ಬ್ರಿಜೇಶ್ ದೀಕ್ಷಿತ್,** ಆಯುಕ್ತರು, ಕೃಷಿ ಇಲಾಖೆ

ಕಳೆದ ಸಾಲಿನ ರಸಗೊಬ್ಬರ ಸಂಗ್ರಹ

ರಸಗೊಬ್ಬರ	ಪ್ರಮಾಣ (ಲಕ್ಷಮೆಟ್ರಿಕ್ ಟನ್)
ಡಿಎಪಿ	1.12
ಎಂಒಪಿ	1.21
ಕಾಂಪ್ಲೆಕ್ಸ್	5.00
ಯೂರಿಯಾ	4.20

2020-21ರಲ್ಲಿ ರಸಗೊಬ್ಬರ ದರ

ಯೂರಿಯಾ	266 ರೂ.
ಎಂಒಪಿ	850 ರೂ.
ಡಿಎಪಿ - ಗ್ರೇಡ್ 1	1,400 ರೂ.
ಗ್ರೇಡ್ 2	1,350 ರೂ.
ಗ್ರೇಡ್ 3	950 ರೂ.
ಕಾಂಪ್ಲೆಕ್ಸ್ - ಗ್ರೇಡ್ 1	1,150 ರೂ.
ಗ್ರೇಡ್ 2	1,000 ರೂ.
ಗ್ರೇಡ್ 3	950 ರೂ.

15-04-2021 Vk Pg 02

ಹಳೆ ದರದಲ್ಲೇ ರಸಗೊಬ್ಬರ ಮಾರಾಟ

ಬೆಂಗಳೂರು: ದೇಶಾದ್ಯಂತ ಲಭ್ಯವಿರುವ ಪೋಷಕಾಂಶಯುಕ್ತ ರಸಗೊಬ್ಬರಗಳ ಹಳೆ ದಾಸ್ತಾನನ್ನು ಹಳೆ ದರದಲ್ಲಿಯೇ ಮಾರಾಟ ಮಾಡಲು ರಸಗೊಬ್ಬರ ಉತ್ಪಾದಕರು ಸಮ್ಮತಿಸಿದ್ದಾರೆ ಎಂದು ಕೇಂದ್ರ ಸಚಿವ ಡಿ ವಿ ಸದಾನಂದ ಗೌಡ ಹೇಳಿದ್ದಾರೆ.



ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಫ್ಕೋ, ಐಪಿಎಲ್ ನಂತಹ ಪ್ರಮುಖ ಕಂಪನಿಗಳು ಹಳೆ ದರ ಮುಂದುವರಿಸುವ ಬಗ್ಗೆ ಆಯಾ ರಾಜ್ಯ ಕೃಷಿ ಇಲಾಖೆಗಳಿಗೆ ಈಗಾಗಲೇ ಪತ್ರ ಬರೆದಿವೆ ಎಂದ ಅವರು ತಿಳಿಸಿದರು.

ರಸಗೊಬ್ಬರ ತಯಾರಿಕೆಗೆ ಬೇಕಾಗುವ ಶೇಕಡಾ 90ರಷ್ಟು ಕಚ್ಚಾವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾವಸ್ತುಗಳ ಬೆಲೆ ತೀವ್ರ ಹೆಚ್ಚಾದ ಕಾರಣ ಇಲ್ಲಿಯೂ ಹೆಚ್ಚಾಗಿತ್ತು. ಸದ್ಯಕ್ಕಂತೂ ರಸಗೊಬ್ಬರ ಕಂಪನಿಗಳು ಹಳೆ ದಾಸ್ತಾನನ್ನು ಹಳೆ ದರದಲ್ಲಿಯೇ ಮಾರಾಟ ಮಾಡಲು ಒಪ್ಪಿಕೊಂಡಿವೆ. ರಸಗೊಬ್ಬರದ ಪ್ರಮುಖ ಬಳಕೆದಾರರಾದ ಅಮೆರಿಕ, ಬ್ರೆಜಿಲ್, ಐರೋಪ್ಯ ಒಕ್ಕೂಟ ದೇಶಗಳಲ್ಲಿಹಂಗಾಮು ಮುಗಿದಿರುವುದರಿಂದ ಬೇಡಿಕೆ ಕುಸಿದು ಬೆಲೆಯೂ ಇಳಿಯತೊಡಗಿದೆ. ಹಾಗಾಗಿ ಬರುವ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಸುಧಾರಿಸುವ ವಿಶ್ವಾಸವಿದೆ ಎಂದು ಹೇಳಿದರು.

ದೇಶದಲ್ಲಿ ಎಲ್ಲ ನಮೂನೆಯ ರಸಗೊಬ್ಬರಗಳು ಸಾಕಷ್ಟು ದಾಸ್ತಾನು ಇವೆ. ಮುಂಗಾರು ಹಂಗಾಮಿನಲ್ಲಿ ಯಾವುದೇ ರೀತಿಯಲ್ಲಿ ರಸಗೊಬ್ಬರ ಕೊರತೆ ಆಗದಂತೆ ನೋಡಿಕೊಳ್ಳಲಾಗುವುದು. ಇದಕ್ಕೆ ಈಗಿನಿಂದಲೇ ಎಲ್ಲ ರೀತಿಯ ಪೂರ್ವಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ರಸಗೊಬ್ಬರ ಬೆಲೆಏರಿಕೆ ಹಾಗೂ ಸಬ್ಸಿಡಿ ಬಗ್ಗೆ ಕೇಂದ್ರ ಸರ್ಕಾರವನ್ನು ಟೀಕಿಸಿ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಮಾಡಿರುವ ಟ್ವೀಟ್ ಅನ್ನು ಬಾಲಿಶ. ಮಾಜಿ ಪ್ರಧಾನಿ ಮಗನಾಗಿ, ಮಾಜಿ ಮುಖ್ಯಮಂತ್ರಿಯಾಗಿ ಅವರಿಗೆ ದೇಶದ ರಸಗೊಬ್ಬರ ಬೆಲೆ ಹಾಗೂ ಸರಬರಾಜು ವ್ಯವಸ್ಥೆ ಯಾವ ರೀತಿ ಕಾರ್ಯನಿರ್ವಹಿಸುತ್ತದೆ ಎಂಬುದರ ಪ್ರಾಥಮಿಕ ತಿಳುವಳಿಕೆಯೂ ಇಲ್ಲದಿರುವುದು ಕೋಚನೀಯವಾಗಿದೆ. ಅವರಿಗೆ ಈ ಬಗ್ಗೆ ಏನಾದರು ಮಾಹಿತಿ ಬೇಕಾದರೆ ಕೇಳಲಿ. ರಸಗೊಬ್ಬರ ಸಬ್ಸಿಡಿಗಾಗಿ ಭಾರೀ ದೊಡ್ಡ ಮೊತ್ತದ ಹಣವನ್ನು ವ್ಯಯಿಸಲಾಗುತ್ತದೆ. 2019-20ನೇ ಸಾಲಿನಲ್ಲಿ ರಸಗೊಬ್ಬರ ಸಬ್ಸಿಡಿಗಾಗಿ 83,467.85 ಕೋಟಿ ರೂ ಒದಗಿಸಲಾಗಿತ್ತು. ಕಳೆದ ಸಾಲಿನಲ್ಲಿ (2020-21) ಕೊರೊನಾ ಸಂಕಷ್ಟದ ಮಧ್ಯೆಯೂ 1,31,229.51 ಕೋಟಿ ರೂಪಾಯಿ ರಸಗೊಬ್ಬರ ಸಬ್ಸಿಡಿ ನೀಡಲಾಗಿದೆ. ಒಂದೇಒಂದು ನಯಾಪೈಸೆ ಸಬ್ಸಿಡಿಯನ್ನೂ ಉಳಿಸಿಕೊಂಡಿಲ್ಲ ಎಂದರು.

15-04-2021 Sk Pg 05

UASB LIBRARY
Newspaper Clippings
Pg .2 Thursday 15-04-2021 Jai Kisan



ರಸಗೊಬ್ಬರಕ್ಕೆ ಸಬ್ಸಿಡಿ ಹೆಚ್ಚಿಸಿ

ರಸಗೊಬ್ಬರದ ಬೆಲೆ ಅಧಿಕಗೊಂಡಿದೆ. ಇದರಿಂದ ರೈತರ ಮೇಲೆ ಹೆಚ್ಚಿನ ಹೊರೆ ಬೀಳಲಿದೆ. ಇದನ್ನು ತಪ್ಪಿಸಬೇಕು ಎಂದರೆ ಕೇಂದ್ರ ಸರ್ಕಾರ ಸಬ್ಸಿಡಿ ಪ್ರಮಾಣವನ್ನು ಹೆಚ್ಚಿಸಬೇಕು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಫಾಸ್ಫೇಟ್ ಆಮ್ಲ ಮತ್ತು ಅಮೋನಿಯಾ ದರ ಅಧಿಕಗೊಂಡಿದೆ. ಇವುಗಳನ್ನು ಆಮದು ಮಾಡಿಕೊಳ್ಳುವುದು ಅನಿವಾರ್ಯ. ಡಿಎಪಿ ದರಶೇಕಡ 2, ಎನ್‌ಪಿಕೆ ಶೇ17, ಪೊಟ್ಯಾಷ್ ಶೇಕಡ 19 ರಷ್ಟು ಅಧಿಕಗೊಂಡಿದೆ. ಅದರಲ್ಲೂ ಎಲ್ಲ ರೈತರು ಬಳಸುವ ಡಿಎಪಿ ರಸಗೊಬ್ಬರದ ಬೆಲೆ ಶೇಕಡ 58 ರಷ್ಟು ಹೆಚ್ಚಿದೆ. ಇಫ್ಕೋ 1.13 ಮಿಲಿಯನ್ ಟನ್ ರಸಗೊಬ್ಬರವನ್ನು ಹಳೆಯ ದರದಲ್ಲಿ ಮಾರಾಟ ಮಾಡುವುದಾಗಿ ತಿಳಿಸಿದೆ. ಒಟ್ಟು 11.26 ಲಕ್ಷ ಮಿಲಿಯನ್ ಟನ್ ಗೊಬ್ಬರ ಹಳೆಯದರದಲ್ಲಿ ರೈತರಿಗೆ ಲಭಿಸಲಿದೆ. ರಸಗೊಬ್ಬರದ ಬೇಡಿಕೆ ಈಗ ವರ್ಷ ಶೇಕಡ 8 ರಷ್ಟು ಅಧಿಕಗೊಂಡಿದೆ.

ಇದೆಲ್ಲವನ್ನೂ ನೋಡಿದರೆ ರೈತರ ಚಳವಳಿಗೆ ಪ್ರತೀಕಾರವಾಗಿ ರಸಗೊಬ್ಬರದ ಬೆಲೆ ಹೆಚ್ಚಿಸಲಾಗಿದೆಯೇ ಎಂಬ ಅನುಮಾನ ಬರುತ್ತದೆ. ಸಾಮಾನ್ಯವಾಗಿ ರಸಗೊಬ್ಬರ ತಯಾರಿಕೆ ಕಂಪನಿಗಳು ಸರ್ಕಾರದೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತದೆ. ಸರ್ಕಾರ ತಾನು ಕೊಡುವ ಸಹಾಯಧನ ಮತ್ತು ಉತ್ಪಾದನೆ ಮೆಚ್ಚಿವನ್ನು ಪರಿಶೀಲಿಸಿ ದರ ನಿಗದಿಪಡಿಸಬೇಕು. ಆದರೆ ಈ ಬಾರಿ ದರ ನಿಗದಿಪಡಿಸುವುದರಲ್ಲಿ ಗೊಂದಲ ಮೂಡಿರುವಂತೆ ಕಂಡು ಬರುತ್ತಿದೆ. ಹೊಸ ದರವನ್ನು ರಸಗೊಬ್ಬರದ ಚೀಲಗಳ ಮೇಲೆ ನಮೂದಿಸಿ ಈಗ ಕಡಿಮೆ ಮಾಡಲಾಗುವುದು ಎಂದು ಹೇಳುತ್ತಿರುವುದು ಸಂದೇಹಕ್ಕೆ ಕಾರಣವಾಗಿದೆ. ಈ ಬೆಲೆ ಏರಿಕೆಯಿಂದ ಎಣ್ಣೆಕಾಳು, ಬೇಳೆಕಾಳು, ಬತ್ತದ ಬೆಲೆ ಅಧಿಕಗೊಳ್ಳಲಿದೆ. ಅಲ್ಲದೆ ಸೋಯಾಬೀನ್‌ಗೆ ಡಿಎಪಿ ಅತ್ಯಗತ್ಯ. ಅದರ ಬೆಲೆಯೂ ಅಧಿಕಗೊಂಡಿರುವುದರಿಂದ ಆಹಾರ ಧಾನ್ಯಗಳ ಬೆಲೆ ಅಧಿಕಗೊಳ್ಳಲಿದೆ. ಇದುವರೆಗೆ ರಸಗೊಬ್ಬರದ ಬೆಲೆಯನ್ನು ನಿಯಂತ್ರಿಸಿಕೊಂಡು ಬರಲಾಗಿದೆ. ಹಿಂದೆ ಯೂರಿಯಾ ದುರ್ಬಳಕೆ ಆಗುತ್ತಿತ್ತು. ಇದನ್ನು ತಪ್ಪಿಸಲು ಯೂರಿಯಾಗೆ ಬಣ್ಣ ಹಾಗೂ ಬೇವಿನ ಎಣ್ಣೆ ಮಿಶ್ರಣ ಮಾಡಲಾಯಿತು. ಇದರಿಂದ ದುರುಪಯೋಗ ಕಡಿಮೆಯಾಯಿತು. ಪ್ರತಿ ಬೆಳೆಯ ಬಿತ್ತನೆ ಆರಂಭವಾಗುವ ಮೊದಲೇ ನಮಗೆ ಈ ವರ್ಷ ಎಷ್ಟು ರಸಗೊಬ್ಬರ ಬೇಕು ಎಂದು ತಿಳಿದಿರುತ್ತದೆ. ಅದಕ್ಕೆ ತಕ್ಕಂತೆ ರಸಗೊಬ್ಬರಗಳ ತಯಾರಿಕೆ ನಡೆಯುತ್ತದೆ. ಹೀಗಿರುವಾಗ ಇದ್ದಕ್ಕಿದ್ದಂತೆ ದರ ಏರಿಕೆ ಎಲ್ಲರನ್ನೂ ಚಿಂತೆಗೀಡು ಮಾಡಿದೆ. ಇದರಿಂದ ಮುಂದಿನ ದಿನಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಅಧಿಕಗೊಳ್ಳುವುದು ಸಹಜ. ಅಲ್ಲದೆ ರೈತರು ಆರ್ಥಿಕವಾಗಿ ಸಬಲರಲ್ಲ. ಅವರಿಗೆ ರಸಗೊಬ್ಬರದ ಬೆಲೆ ಏರಿಕೆ ಆರ್ಥಿಕವಾಗಿ ದೊಡ್ಡ ಸಮಸ್ಯೆಗೆ ಕಾರಣವಾಗಲಿದೆ. ಇದನ್ನು ತಪ್ಪಿಸಬೇಕು ಎಂದರೆ ಸಹಾಯಧನ ಹೆಚ್ಚಿಸಬೇಕು. ಇದರಿಂದ ಸರ್ಕಾರಕ್ಕೆ ಹೊರೆ ಏನೂ ಆಗುವುದಿಲ್ಲ. ಈಗ ಕೊರೊನಾದಿಂದ ನಗರದ ಕಡು ಬಡವರು ಮತ್ತು ದಿನಗೂಲಿ ನೌಕರರು ಗ್ರಾಮೀಣ ಪ್ರದೇಶಕ್ಕೆ ಸ್ಥಳಾಂತರಗೊಂಡಿದ್ದಾರೆ. ಅವರಿಗೆ ಕೆಲಸ ಕೊಟ್ಟಿರುವುದು ಕೃಷಿರಂಗ. ಹೀಗಿರುವಾಗ ರಸಗೊಬ್ಬರದ ಬೆಲೆ ಹೆಚ್ಚಿಸಿದಲ್ಲಿ ಅವರಿಗೆ ಕೂಲಿ ಸಿಗುವುದು ಕಡಿಮೆಯಾಗುತ್ತದೆ. ಕೇಂದ್ರ ಸರ್ಕಾರ ಕೈಗಾರಿಕೆ ಮತ್ತು ಬ್ಯಾಂಕ್ ಕ್ಷೇತ್ರಗಳಿಗೆ ಸಾಕಷ್ಟು ನೆರವು ನೀಡಿದೆ. ಕೃಷಿ ರಂಗಕ್ಕೆ ನೆರವು ನೀಡಿರುವುದು ಬಹಳ ಕಡಿಮೆ. ಆದರೂ ಕೃಷಿ ರಂಗ ನಮ್ಮನ್ನು ಕಾಪಾಡಿದೆ. ಅದಕ್ಕೆ ಪ್ರತಿಯಾಗಿ ರಸಗೊಬ್ಬರದ ಬೆಲೆಯನ್ನು ನಿಯಂತ್ರಿಸಿದರೆ ಆಹಾರ ಧಾನ್ಯ ಉತ್ಪಾದನೆ ಕುಂಠಿತಗೊಳ್ಳುವುದಿಲ್ಲ.

ಉತ್ತಮ ಮಳೆ ಬಂದಿರುವಾಗ, ನದಿಗಳು ತುಂಬಿ ಹರಿಯುತ್ತಿರುವಾಗ ರೈತರಿಗೆ ರಸಗೊಬ್ಬರದ ಬೆಲೆ ಏರಿಕೆ ಅಡ್ಡಿಯಾಗಬಾರದು.

ಎಲ್ಲ ಕಡೆ ಸಾವಯವ ಗೊಬ್ಬರ ಬಳಕೆ ಅಧಿಕಗೊಳ್ಳಬೇಕು ಎಂದು ಹೇಳಿದರೂ ಸಾವಯವ ಗೊಬ್ಬರ ಬಳಕೆ ಹೆಚ್ಚು ಇಳುವರಿ ತರುವುದಿಲ್ಲ. ಅಲ್ಲದೆ ಸಾವಯವ ಗೊಬ್ಬರ ತಯಾರಿಕೆ ಕೂಡ ಇನ್ನೂ ಅಭಿವೃದ್ಧಿ ಕಂಡಿಲ್ಲ. ಕೆಲವು ಬೆಳೆಗಳಿಗೆ ರಸಗೊಬ್ಬರ ಬಳಕೆ ಅನಿವಾರ್ಯ. ಸಾವಯವ ಗೊಬ್ಬರದಿಂದ ಎಲ್ಲ ಬೆಳೆಯನ್ನು ಇಳುವರಿ ಕಡಿಮೆಯಾಗದಂತೆ ಬೆಳೆಯಬಹುದು ಎಂಬ ವಿಶ್ವಾಸ ರೈತರಿಗೆ ಬಾರದೆ ಇದ್ದಲ್ಲಿ ಅವರು ರಸಗೊಬ್ಬರ ಬಳಕೆಯನ್ನು ನಿಲ್ಲಿಸುವುದಿಲ್ಲ. ನಮ್ಮ ರೈತ ಉತ್ತಮ ಆರ್ಥಿಕ ತಜ್ಞ. ಆತ ಲಾಭ ನಷ್ಟ ಲೆಕ್ಕ ಹಾಕಿ ಬಳಸುತ್ತಾನೆ ಎಂಬುದು ಸ್ಪಷ್ಟ. ಅವನಿಗೆ ಸಾವಯವ ಕೈಗೆ ಎಟುಕುವ ಗೊಬ್ಬರವಾಗಬೇಕು. ಆಗ ರಸಗೊಬ್ಬರದ ಮೇಲಿನ ಬೇಡಿಕೆ ಇಳಿಮುಖಗೊಳ್ಳುತ್ತದೆ. ಉತ್ತಮ ಇಳುವರಿ ಇಲ್ಲ ಎಂದರೆ ದೇಶದ ಹಸಿದ ಹೊಟ್ಟೆಗಳಿಗೆ ಸಕಾಲದಲ್ಲಿ ಆಹಾರ ನೀಡುವುದು ಕಷ್ಟ.





ಸಂಯು
ಸಂ

15-04-2021 Sk Pg 06

ಅರಳಿದ ಕಾಫಿ ಹೂಗಳು



ಅಕಾಲಿಕ ಮಳೆಗೆ ಅರಳಿದ ಕಾಫಿ ಹೂಗಳು.

ನಾಪೋಕ್ಲು : ಕಳೆದ ವಾರಗಳಿಂದ ಕೊಟ್ಟಮುಡಿ, ಹೊದವಾಡ ಗ್ರಾಮಗಳಿಗೆ ಸುರಿದ ಅಕಾಲಿಕ ಮಳೆಯಿಂದಾಗಿ ಈ ವಿಭಾಗದಲ್ಲಿನ ಕಾಫಿ ತೋಟದಲ್ಲಿನ ಕಾಫಿ ಹೂಗಳು ಅರಳಿ ನಿಂತು ರೈತನ ಮೊಗದಲ್ಲಿ ಮಂದಹಾಸ ಬೀರಿದೆ. ಸಾಧಾರಣವಾಗಿ ಕಾಫಿ ಹೂಗಳು ಫೆಬ್ರವರಿ- ಮಾರ್ಚ್ ತಿಂಗಳ ಮಳೆಗೆ ಹೂ ಬಿಡುತ್ತವೆ. ಬಿಸಿಲಿನ ಬೇಗೆಯಿಂದ ತತ್ತರಿಸಿದ ಜನತೆ ಕಳೆದ ಈ ಮಳೆಯಿಂದ ಸ್ವಲ್ಪ ಮಟ್ಟಿಗೆ ತಂಪಾಗಿದ್ದಾನೆ. ಈ ವಿಭಾಗಕ್ಕೆ ಇದೇ ಮೊದಲ ಬಾರಿಯ ಮಳೆಯಾಗಿದ್ದು 80% ಕಾಫಿ ಹೂಗಳು ಅರಳಿ ಕಾಫಿ ತೋಟದಲ್ಲಿ ಬೆಳದಿಂಗಳು ಹರಡಿದಂತೆ ಗೋಚರಿಸುತ್ತಿದೆ. ಮುಂದೆ ಬೆಳೆಗಾರ ಉತ್ತಮ ಫಸಲು ತೆಗೆಯಲು ಈ ಮಳೆಯು ಸಹಕಾರಿಯಾಗಲಿದೆ. ಈಗಾಗಲೇ ಹಲವಾರು ಸ್ಪಿಂಕಲರ್ ಮುಖಾಂತರ ನೀರು ಹಾಯಿಸಿದ್ದು ಈ ಮಳೆಯು ಉತ್ತಮ ಬ್ಯಾಕಿಂಗ್ ಆಗಿ ಪರಿಣಮಿಸಿದೆ.

15-04-2021
Vk Pg 02